> ಬಸವಕಲ್ಯಾಣದ ಶಂಕರದಾಸಿಮಯ್ಯ ಮಠದಲ್ಲಿ ಕತ್ತರಿ ಚಿತ್ರವಿರುವ ಕಲ್ಲೊಂದಿದೆ. ಅಲ್ಲಿ ಪರುಷಕಟ್ಟೆ ಇದೆ. ಬಸವಣ್ಣನವರಿಗೆ ಸಂಬಂಧಿಸಿ ಖರೇ ಗುರುತು ಉಳಿದದ್ದು ಪರುಷಕಟ್ಟೆಯಲ್ಲೆ.

ಬಗ್ಗೆ ಅವರಿಗೆ ಅಪಾರ ಆಸಕ್ತಿ ಇತ್ತು. ಬೀರಪ್ಪ ಶಿವನ ವಂಶಸ್ಥ. ಸೃಷ್ಟಿ ಕಲ್ಪನೆ ಏನಿದೆ ಅದರ ಬಗ್ಗೆ ಕಾವ್ಯ ಮಹತ್ವದ ಸೂಚನೆ ಕೊಟ್ಟಿದೆ. ಕೈಲಾಸದಲ್ಲಿ ಜೀವಿಯ ಸೃಷ್ಟಿ ಸಾಧ್ಯವಿಲ್ಲ. ಅದು ನಡೆಯುವುದು ಭೂಲೋಕದಲ್ಲಿ. ಹೀಗಾಗಿಯೇ ಪಾರ್ವತಿ ಕುರಿಗಳನ್ನು ಭೂಲೋಕಕ್ಕೆ ಹೊಡೆದುಕೊಂಡು ಬರುವಳು. ಪಾರ್ವತಿ ಭೂಮಿ ಮೇಲೆ ಬಂದು ಕೂಡುವಳು. ಆಕೆ ಮಣ್ಣು ತೆಗೆದುಕೊಂಡು ಅದಕ್ಕೆ ಮೊಲೆ ಹಾಲು ಕುಡಿಸುತ್ತಾಳೆ. ಎರಡು ಮಣ್ಣಿನ ಮುದ್ದೆ ತಗೊಂಡು ಹಾಲಿನಲ್ಲಿ ನೆನೆಸಿ ಎರಡು ಗೊಂಬೆ ಮಾಡಿ ನಿಲ್ಲಿಸುತ್ತಾಳೆ. ಶಿವ ಅಲ್ಲಿಗೆ ಬಂದು ಜೀವ ತುಂಬುತ್ತಾನೆ. ಅಂದರೆ, ಹೆಣ್ಣು ಗಂಡಿಲ್ಲದೆ ಸೃಷ್ಟಿ ಸಾಧ್ಯವಿಲ್ಲ ಅನ್ನೋದು. ಅಲ್ಲದೆ, ಜೀವಸೃಷ್ಟಿಗೆ ಮಣ್ಣಿನ ಸ್ಪರ್ಶ ಬೇಕು ಎಂಬುದೇ ಒಂದು ಅದ್ಭುತ ಕಲ್ಪನೆ.

◆ **ವಚನಗಳ ಅಧ್ಯಯನಕ್ಕೆ ಮೌಖಿಕ ಆಕರಗಳು ಭಾಳ ಮುಖ್ಯ ಅಂತ ತಮಗೆ ಯಾವಗನ್ನಿಸ್ತು? ಯಾಕಂದ್ರ, ವಚನಕಾರರ ಕುರಿತು ಸಂಶೋಧನೆ ಮಾಡುವಾಗ ನೀವು ಈ ಮೌಖಿಕ ಆಕರಗಳನ್ನು ದೊಡ್ಡ ಪ್ರಮಾಣದಲ್ಲಿ ಬಳಸಿದ್ರಿ. ನಿಮ್ಮ ಶರಣ ಸ್ಮಾರಕಗಳ ಅಧ್ಯಯನದಲ್ಲೂ ಈ ಮೌಖಿಕ ಆಕರಗಳೇ ಮೂಲ ಪ್ರಮಾಣಗಳಾಗಿವೆ.**

ಕು.ಶಿ. ಹರಿದಾಸಭಟ್ಟರು 1992ರಲ್ಲಿ ಕಲಬುರುಗಿ ಜಿಲ್ಲೆಯ ಹೆಣ್ಣುಮಕ್ಕಳ ಹಾಡು ಸಂಗ್ರಹಿಸಲು ದುಡ್ಡು ಕೊಟ್ಟಿದ್ದರು. ಅದೊಂದು ಯೋಜನೆ. ಗಂಗಾನಗರದಲ್ಲಿ ಹಾಡುವ ಹೆಣ್ಣುಮಕ್ಕಳಿದ್ದರು. ಅಲ್ಲಿ ಕಾಳಮ್ಮ ಎಂಬ ಹೆಣ್ಣುಮಗಳಿದ್ದಳು. ಆಕೆ ಹಾಡಿದ್ದು ಅಕ್ಕನಾಗಮ್ಮನ ಕುರಿತು. ಅದೂ ಚೆನ್ನಬಸವಣ್ಣನ ಹುಟ್ಟಿನ ಕುರಿತು. ಅಕ್ಕನಾಗಮ್ಮನಿಗೆ ಮದುವೆಯಾಗಿದೆ. ಗಂಡನ ಮನೆಯವರ ಜೊತೆ ಜಗಳವಾಗಿ ಆತ ಹೊರಹಾಕಿದ್ದಾನೆ. ಅಷ್ಟರೊಳಗೆ ಅವರಿಬ್ಬರ ನಡುವೆ ದೈಹಿಕ ಸಂಬಂಧವಾಗಿತ್ತು. ಆಕೆ ಮನೆಗೆ ಬಂದು ಕೆಲ ತಿಂಗಳ ಅನಂತರ ಬಸಿರಾದಾಗ ಜನರಿಗೆ ಸಂಶಯ ಬಂದಿದೆ. ಅವಳ ಕುರಿತು ಅಪಪ್ರಚಾರ ನಡೆದಿದೆ. ಇದೆಲ್ಲ ಆ ಹಾಡಿನಲ್ಲಿತ್ತು. ನನಗೆ ಅಚ್ಚರಿ ಉಂಟಾಯಿತು. ಅರೆ! ವಚನಕಾರರಿಗೆ ಸಂಬಂಧಪಟ್ಟ ಮೌಖಿಕ ಮಾಹಿತಿಗಳು ಇದ್ದಾವಲ್ಲ ಅಂತ. ಇದನ್ನ ಹುಡುಕೋದು ಒಂದು ಅಭ್ಯಾಸವಾಗಿಬಿಡ್ತು. ಕೆಲ ಪರೀಕ್ಷೆಗಳು ನಡೆದು ಅವಳನ್ನು ಅತ್ತೆ ಮಾವ ಮತ್ತೆ ಮನೆ ಸೇರಿಸಿಕೊಂಡರು. ಹೀಗಾಗಿ, ಹೋದಲ್ಲಿ ಬಂದಲ್ಲಿ ನಾನು ಶರಣರ ಕುರಿತು ಇರುವ ಹಾಡುಗಳನ್ನು ಸಂಗ್ರಹಿಸತೊಡಗಿದೆ. ನೂರಾರು ಶರಣರ ಹಾಡುಗಳು ಸಿಕ್ಕವು. ಇನ್ನು ಶರಣರ ಸ್ಥಳಗಳಿಗೆ ಹೋದರೆ ಮೌಖಿಕ ಮಾಹಿತಿ ಹೆಚ್ಚಿನ ಪ್ರಮಾಣದಲ್ಲಿ ಸಿಗಬಹುದೇನೊ ಅಂತನ್ನಿಸ್ತು. ನಾನು ಮತ್ತ ನನ್ನ ಹೆಂಡತಿ ಜಯಶ್ರೀ ತಿರುಗಾಡಿದೆವು. ಅನೇಕ ಮಾಹಿತಿಗಳು ಲಭ್ಯವಾದವು. ಶರಣರ ಸಾಹಿತ್ಯ ಮತ್ತು ಜೀವನ ಕುರಿತು ಮೌಖಿಕ ಮಾಹಿತಿ ಸಂಗ್ರಹ ಸಂಪಾದನಾ ಮತ್ತು ಪ್ರಕಟಣಾ ಯೋಜನೆಯೊಂದನ್ನು ಆಯ್ಕೆಮಾಡಿಕೊಂಡೆವು. ಆರಂಭದಲ್ಲಿ ಸ್ಮಾರಕಗಳ ಬಗ್ಗೆ ಅಷ್ಟು ಆಸಕ್ತಿ ಇರಲಿಲ್ಲ. ಆದರೆ, ಸ್ಮಾರಕಗಳೆಡೆಗೆ ಹೋಗಿ ಕೇಳಿದಾಗ ಹೊಸ ಮಾಹಿತಿಗಳು ಸಿಗಲು ಆರಂಭವಾದವು. ಆಮೇಲೆ ಇದೇ ಮುಖ್ಯ ಎನಿಸಿತು. ಜಿ.ಎಸ್. ಸಿದ್ಧಲಿಂಗಯ್ಯ ಅವರು ಭಾಳ ಸಹಾಯ ಮಾಡಿದ್ರು. ಈ ಕೆಲಸಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದ್ವು. ಸಂಶೋಧನೆಗೆ ದೊಡ್ಡ ಮಾರ್ಗ ನಿರ್ಮಾಣವಾಯಿತು.